# ಬ್ಯಾಡ್ಮಿಂಟನ್‌ನ ಭಲೇ ಜೋಡಿ

**ವಿಶ್ವ ಬ್ಯಾಡ್ಮಿಂಟನ್ ನಕಾಶೆಯಲ್ಲಿ ಭಾರತ ಸಿಂಗಲ್ಸ್ ಮತ್ತು ತಂಡ ವಿಭಾಗದಲ್ಲಿ ಗಮನಾರ್ಹ ಸಾಧನೆ ಮಾಡಿದೆಯಾದರೂ ಪುರುಷರ ಡಬಲ್ಸ್ ವಿಭಾಗದಲ್ಲಿ ಗಮನ ಸೆಳೆದಿರಲಿಲ್ಲ. ಯುವ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿ ರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಇಂಡೋನೇಷ್ಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಡಬಲ್ಸ್ ಪ್ರಶಸ್ತಿ ಜಯಿಸಿ ಐತಿಹಾಸಿಕ ಸಾಧನೆ ಮಾಡಿದ್ದಾರೆ. ಈ ಭಲೇ ಜೋಡಿಯ ಮುಂದೆ ಸವಾಲುಗಳ ಹಾದಿಯೂ ಇದೆ.**

■ **ಪ್ರಮೋದ**

‘ಬೆಳೆಯುವ ಸಿರಿ ಮೊಳಕೆಯಲ್ಲಿ ನೋಡು’ ಎನ್ನುವಂತೆ ಈಗಿನ ಭಾರತದ ಬ್ಯಾಡ್ಮಿಂಟನ್ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿ ರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಮೊಳಕೆಯೊಡೆದು ಸಾಧನೆಯ ಗೋಪುರ ಕಟ್ಟಿದ್ದಾರೆ. ಈ ಗೋಪುರದ ಎತ್ತರ ಇನ್ನೂ ದೊಡ್ಡದಾಗಬೇಕಾದ ಸವಾಲೂ ಇದೆ. ಇಂಡೊನೇಷ್ಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಡಬಲ್ಸ್ ಪ್ರಶಸ್ತಿ ಜಯಿಸಿ ಐತಿಹಾಸಿಕ ಸಾಧನೆ ಮಾಡಿದ್ದು, ಸೂಪರ್ 1000 ಟೂರ್ನಿಯಲ್ಲಿ ಪುರುಷರ ವಿಭಾಗದ ಡಬಲ್ಸ್ ಪ್ರಶಸ್ತಿ ಜಯಿಸಿದ ಭಾರತದ ಮೊದಲ ಜೋಡಿ ಎನ್ನುವ ಹೆಗ್ಗಳಿಕೆ ಹೊಂದಿದ್ದಾರೆ.

ಭಾರತದ ಕ್ರೀಡಾ ಕ್ಷಿತಿಜದಲ್ಲಿ ಪ್ರತಿ ಟೂರ್ನಿಯಿಂದಲೂ ಹೊಸ ನಕ್ಷತ್ರಗಳು ಹೊಳೆಯುತ್ತಿವೆ. ಸಾತ್ವಿಕ್ ಮತ್ತು ಚಿರಾಗ್ ಶೆಟ್ಟಿ ಮಲೇಷ್ಯಾದ ಆ್ಯರನ್ ಚಿಯಾ ಮತ್ತು ಸೊಹ ವೂಯಿ ಯೀಕಾ ಎದುರು ಗೆಲುವು ಪಡೆದಿದ್ದು ಶ್ರೇಷ್ಠ ಸಾಧನೆ. ಇದರಿಂದಾಗಿ ಭಾರತದ ಆಟಗಾರರಿಗೆ ಈಗ ‘ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್’ ರ್‍ಯಾಂಕಿಂಗ್‌ನಲ್ಲಿ ಮೂರನೇ ಸ್ಥಾನದ ಗೌರವ ಲಭಿಸಿದೆ. ಈ ಜೋಡಿ ಹಿಂದಿನ ವರ್ಷದ ಚಾಂಪಿಯನ್‌ಗಳನ್ನು ಸೋಲಿಸಿ ಪ್ರಶಸ್ತಿ ಜಯಿಸಿದ್ದು ಮತ್ತಷ್ಟು ಭರವಸೆ ಹುಟ್ಟು ಹಾಕಿದೆ. ಮುಂದಿನ ವರ್ಷ ಕ್ರೀಡಾ ಕೂಟಗಳಲ್ಲಿ ಶ್ರೇಷ್ಠವಾದ ಒಲಿಂಪಿಕ್ಸ್ ನಡೆಯಲಿದೆ. ಅದಕ್ಕೂ ಮೊದಲೇ ಭಾರತ ಮಾಡಿರುವ ಚಿನ್ನದಂಥ ಸಾಧನೆ ಒಲಿಂಪಿಕ್ಸ್‌ನಲ್ಲೂ ಪದಕ ಗೆಲ್ಲುವ ಭರವಸೆ ಮೂಡಿಸಿದೆ.

ಸಾತ್ವಿಕ್ ಮತ್ತು ಚಿರಾಗ್ ಇತ್ತೀಚಿನ ವರ್ಷಗಳಲ್ಲಿ ಭಾರತದ ಬ್ಯಾಡ್ಮಿಂಟನ್‌ನ ಡಬಲ್ಸ್ ಶಕ್ತಿಯನ್ನು ವಿಶ್ವಮಟ್ಟದಲ್ಲಿ ತೋರಿಸುತ್ತಿದ್ದಾರೆ. ಇವರು ಕಳೆದ ವರ್ಷ ‘ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್’ನಲ್ಲಿ ಪ್ರಶಸ್ತಿ ಜಯಿಸಿ ಪುರುಷರ ವಿಭಾಗದಲ್ಲಿ ಈ ಸಾಧನೆ ಮಾಡಿದ ಭಾರತದ ಮೊದಲ ಜೋಡಿ ಎನ್ನುವ ಹೆಗ್ಗಳಿಕೆ ಪಡೆದುಕೊಂಡಿದ್ದರು. ಇದಕ್ಕೂ ಮೊದಲು ಮಹಿಳಾ ವಿಭಾಗದಲ್ಲಿ 2011ರಲ್ಲಿ ಜ್ವಾಲಾ ಗುಟ್ಟಾ ಹಾಗೂ ಅಶ್ವಿನಿ ಪೊನ್ನಪ್ಪ ಪದಕ ಗೆದ್ದುಕೊಂಡಿದ್ದರು.

ವಿಶ್ವದ ಬ್ಯಾಡ್ಮಿಂಟನ್ ನಕಾಶೆಯಲ್ಲಿ ಭಾರತ 1980ರ ದಶಕದಲ್ಲಿ ಪ್ರಕಾಶ ಪಡುಕೋಣೆ ಅವರಿಂದಾಗಿ ಹೆಸರು ಮಾಡಿತ್ತು. ಪ್ರತಿಷ್ಠಿತ ಆಲ್ ಇಂಗ್ಲೆಂಡ್ ಟೂರ್ನಿಯಲ್ಲಿ ಪದಕ ಗೆದ್ದ ಮೊದಲ ಭಾರತೀಯ ಮತ್ತು ವಿಶ್ವ ಚಾಂಪಿಯನ್‌ಷಿಪ್‌ನ ಸಿಂಗಲ್ಸ್‌ನಲ್ಲಿ ಪದಕ ಗೆದ್ದ ಮೊದಲ ಭಾರತೀಯ ಎನ್ನುವ ಗರಿಮೆ ಪ್ರಕಾಶ ಅವರು ಹೊಂದಿದ್ದಾರೆ. 2000ರ ಸಮಯದಲ್ಲಿ ಪುಲ್ಲೇಲ ಗೋಪಿಚಂದ್ ಆಲ್ ಇಂಗ್ಲೆಂಡ್ ಓಪನ್‌ನಲ್ಲಿ ಪದಕ ಗೆದ್ದು ಈ ಸಾಧನೆ ಮಾಡಿದ ಎರಡನೇ ಭಾರತೀಯ ಎನಿಸಿದರು. ಇದಾದ ಬಳಿಕ ಭಾರತದ ಸ್ಪರ್ಧಿಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಹಲವು ಪದಕಗಳನ್ನು




ಸಾತ್ವಿಕ್ ಸಾಯಿರಾಜ್ ರಣಕಿ ರೆಡ್ಡಿ ಮತ್ತು ಚಿರಾಗ್ ಶೆಟ್ಟಿ